ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ: 1, 4 ರಿಂದ 6 ನೇ ಪ್ರತಿವಾದಿ ಪರ ಶ್ರೀ.ಡಿ.ಟಿ .ಬಿ ವಕೀಲರಿಂದ**

ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ಹಾಜರಪಡಿಸಿದ್ದು, ಅದರಲ್ಲಿ ಬರೆದ ವಿಷಯಗಳು ಸರಿ ಇರುತ್ತವೆ. ಸದರಿ ವಿಷಯವನ್ನು ತಿಳಿದುಕೊಂಡು ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಮೇಲೆ ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲ ಸಂಗತಿಗಳು ನಿಜ ಇರುತ್ತವೆ.

(ಸಾಕ್ಷಿಯು ಗುರುತಿಸಿಕೊಳ್ಳಲು ಯಾವುದೇ ದಾಖಲೆಗಳು ಇಲ್ಲಾ ಎಂದು ನುಡಿಯುತ್ತಾರೆ)

**ಪಾಟೀ ಸವಾಲು ಃ ವಾದಿ ಪರ ಶ್ರೀ ಐ.ಡಿ.ಎಸ್ ವಕೀಲರಿಂದಃ**

1. ನನಗೆ ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬರುವಂತೆ ನೋಟಿಸ ಬಂದಿಲ್ಲ. 1 ನೇ ಪ್ರತಿವಾದಿ ಮತ್ತು ನಾನು ಯಾವತ್ತು ಕೂಡಿಯೇ ಇರುತ್ತೇವೆ ಎಂದರೆ ಸರಿ. ಮೃತ ರಾಮಪ್ಪ ತೀರಿಕೊಳ್ಳುವ ಮುಂಚೆ ನನ್ನ ಜೊತೆ ಒಳ್ಳೆಯ ಸಂಬಂಧ ಇತ್ತು ಎಂದರೆ ಸರಿ. ರಾಮಪ್ಪ ಮೃತಪಟ್ಟು ಸುಮಾರು 30 ರಿಂದ 40 ವರ್ಷ ಆಯಿತು. ರಾಮಪ್ಪನ ಹೆಂಡತಿ ದುಂಡವ್ವ ಮೃತಪಟ್ಟಿದ್ದಾರೆ ಎಂದರೆ ಸರಿ. ಸದರಿ ರಾಮಪ್ಪರವರಿಗೆ 1 ನೇ ಪ್ರತಿವಾದಿ ಒಬ್ಬ ಗಂಡು ಮಗ ಮತ್ತು ವಾದಿಗಳು ಮತ್ತು 2 ಮತ್ತು 3 ನೇ ಪ್ರತಿವಾದಿಗಳು ಹೆಣ್ಣು ಮಕ್ಕಳು ಹಾಗೂ ಇನ್ನೊಬ್ಬ ಮಗಳು ಭೀಮವ್ವ ಮೃತಪಟ್ಟಿರುತ್ತಾಳೆ ಎಂದರೆ ಸರಿ. ಸದರಿ ಭೀಮವ್ವರವರು ದ್ಯಾಶಾಳ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿದ್ದು ಅವರಿಗೆ ಯಾವುದೇ ಮಕ್ಕಳಿರಲಿಲ್ಲ ಎಂದರೆ ಸರಿ.

2. ಸಾಕ್ಷಿ ಹೇಳಲು ನನ್ನನ್ನು 1 ನೇ ಪ್ರತಿವಾದಿಯೇ ಕರೆದುಕೊಂಡು ಬಂದರು ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಅವರ ತಂದೆಯ ಮಧ್ಯೆ ಭಾಗ ಮಾಡಲು ಮಾತುಕತೆಗೆ 1 ನೇ ಪ್ರತಿವಾದಿಯ ಮನೆಯಲ್ಲಿ ಸೇರಿದ್ದೇವು. ಆಗ ಮೃತ ರಾಮಪ್ಪ, ಆತನ ಹೆಂಡತಿ 1 ನೇ ಪ್ರತಿವಾದಿ ಮತ್ತು ಹೆಣ್ಣು ಮಕ್ಕಳು ಅವರ ಮನೆಯಲ್ಲಿಯೇ ಇದ್ದರು ಎಂದರೆ ಸರಿ. ರಾಮಪ್ಪ ಮತ್ತು 1 ನೇ ಪ್ರತಿವಾದಿ ನಡುವೆ ಮಾತ್ರ ಭಾಗ ಮಾಡುವ ಬಗ್ಗೆ ಮಾತುಕತೆ ಮಾಡಿದೇವು ಎಂದರೆ ಸರಿ. 1 ನೇ ಪ್ರತಿವಾದಿ ಪಾಲಿಗೆ ಬಂದಿರುವ 3 ಪಟ್ಟಿ

ಜಮೀನುಗಳ ಸರ್ವೆ ನಂಬರ ಮತ್ತು ಕ್ಷೇತ್ರ ಹೇಳಲು ಬರುವುದಿಲ್ಲ. ಅದೇ ರೀತಿ 1 ನೇ ಪ್ರತಿವಾದಿ ರಾಮಪ್ಪರವರ ಪಾಲಿಗೆ ಬಂದಿರುವ 2 ಪಟ್ಟಿ ಜಮೀನುಗಳ ಸರ್ವೆ ನಂಬರ ಮತ್ತು ಕ್ಷೇತ್ರ ಹೇಳಲು ಬರುವುದಿಲ್ಲ. ನಾನು ಸದರಿ ಮಾತುಕತೆ ಮಾಡಿದಾಗಿನಿಂದ ರಾಮಪ್ಪ ಮತ್ತು ದುಂಡವ್ವ ಇಬ್ಬರು ಮೃತಪಡುವ ತನಕ 1 ನೇ ಪ್ರತಿವಾದಿ ಮನೆಯಲ್ಲಿಯೇ ಇದ್ದರು ಎಂದರೆ ಸರಿ. ಸದರಿ 1 ನೇ ಪ್ರತಿವಾದಿ ಮತ್ತು ಅವರ ತಂದೆ ನಡುವೆ ಭಾಗ ಆದ ಬಗ್ಗೆ ಮಾಡಿರುವ ದಾಖಲೆಗೆ ಮೃತ ರಾಮಪ್ಪರವರ ಹೆಣ್ಣು ಮಕ್ಕಳ ಸಹಿ ಪಡೆದಿಲ್ಲ.

3. 1 ನೇ ಪ್ರತಿವಾದಿಯೇ ಮನೆತನದ ಯಜಮಾನಿಕೆ ಮಾಡುತ್ತಿದ್ದರು ಎಂದರೆ ಸರಿ. ಆದ್ದರಿಂದ ಸದರಿ ವಾಟ್ನಿ ಪತ್ರ ಆಧಾರದ ಮೇಲೆ ತಹಶಿಲ್ದಾರ ಕಚೇರಿಯಲ್ಲಿ ವರದಿ ಕೊಟ್ಟು ಡೈರಿ ಮಾಡಿಸಿದರು ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಅವರ ತಂದೆ ನಡುವೆ ಪಾಲು ಮಾಡಿರುವ ಆಸ್ತಿಗಳು ರಾಮಪ್ಪರವರ ಹಿರಿಯರ ಆಸ್ತಿಗಳು ಎಂದರೆ ಸರಿ. ದಾವಾ ಆಸ್ತಿಗಳು ನೀರಾವರಿ ಜಮೀನುಗಳು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮತ್ತು ಅವರ ತಂದೆ ನಡುವೆ ಆಗಿರುವ ಪಾಲು ವಿಭಾಗದ ಜಮೀನುಗಳ ಆದಾಯದಿಂದ ಇನ್ನೂಳಿದ ಬೇರೆ ಬೇರೆ ಜಮೀನುಗಳನ್ನು ಖರೀದಿಸುತ್ತಾ ಹೋದರು ಎಂದರೆ ಸರಿ. 1 ನೇ ಪ್ರತಿವಾದಿ ನನಗೆ ಆತ್ಮಿಯ ಇರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-
ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ